# ಪೃಥ್ವಿಗೆ ಅರಿವು ತುಂಬಿದ ಜನನಿ



**ಭವಿಷ್ ಗೌಡ ಉದಯದ 'ಜನನಿ'ಯ ಪೃಥ್ವಿ**

◆ **ಸಿನಿಮಾದಲ್ಲಿ ಯಾವಾಗ ನಟಿಸುತ್ತೀರಿ?**

ಮಂಡ್ಯದ ಮದ್ದೂರು ಮೂಲ. ಸಿನಿಮಾ ಇನ್‌ಸ್ಟಿಟ್ಯೂಟ್‌ನಲ್ಲೇ ನಟನೆಯನ್ನು ಕಲಿತೆ. ನಾಟಕಗಳನ್ನು ಮಾಡುತ್ತಾ ಆಡಿಷನ್ ನೀಡಲು ಆರಂಭಿಸಿದೆ. ಕಲರ್ಸ್ ಕನ್ನಡದ 'ಹೂಮಳೆ' ಮೂಲಕ ಕಿರುತೆರೆಗೆ ಪ್ರವೇಶ ಮಾಡಿದೆ. ನಂತರ 'ಕನ್ನಡತಿ', 'ಮದುಮಗಳು'ನಲ್ಲಿ ಅವಕಾಶ ಸಿಕ್ಕಿತು. ಅದು ಲೀಡ್ ರೋಲ್ ಮಾಡಿದ ಮೊದಲ ಧಾರಾವಾಹಿ. ಇದಾದ ಮೇಲೆ 'ಕಥೆಯೊಂದು ಶುರುವಾಗಿದೆ' ಮಾಡಿದೆ. ಈಗ 'ಲಕ್ಷ್ಮೀ ನಿವಾಸ' ಮಾಡಿದೆ. ಸಿನಿಮಾಗಳಲ್ಲಿಯೂ ಕೆಲಸ ಮಾಡುತ್ತಿದ್ದೇನೆ. ಏಕ್‌ದಂ ನಾಯಕನಾಗುವುದು ಇಷ್ಟವಿಲ್ಲ. ಮೊದಲು ಭಿನ್ನ ಪಾತ್ರಗಳಲ್ಲಿ ನನ್ನನ್ನು ಪರಿಚಯಿಸಿಕೊಳ್ಳಬೇಕು. ಕಿರುತೆರೆಗೂ ಕೂಡ ಹಾಗೆಯೇ ಬಂದಿದ್ದು. ಸೀರಿಯಲ್ ನಿರ್ದೇಶಕರು, ನಿರ್ಮಾಪಕರು, ವ್ಯವಸ್ಥಾಪಕರ ಫೋನ್ ನಂಬರ್ ಸಿಕ್ಕರೆ ಕಾಲ್ ಮಾಡಿ ಅವಕಾಶವನ್ನು ಕೇಳುತ್ತಿದ್ದೆ. ಈಗ ಒಂದು ಧಾರಾವಾಹಿ ಮುಗಿದರೆ ತಕ್ಷಣ ಮತ್ತೊಂದಕ್ಕೆ ಸಿದ್ಧವಾಗುವ ಮಟ್ಟಿಗೆ ಸಂಬಂಧಗಳು ಗಟ್ಟಿಯಾಗಿವೆ. ಸಿನಿಮಾರಂಗಕ್ಕೆ ಹೊಸಬ. ಒಳ್ಳೆಯ ಪಾತ್ರ ಮಾಡುತ್ತಾ ಮುಂದೆ ಬೆಳೆಯಬೇಕು.

◆ **ಯೂಟ್ಯೂಬ್ ಮಾಡಿದ ಉದ್ದೇಶ ಏನು?**

ವರ್ತಮಾನಕ್ಕೆ ಸ್ಪಂದಿಸುವ ಸಮಾಜಮುಖಿ ವಿಷಯಗಳನ್ನು ಇಟ್ಟುಕೊಂಡು ಯೂಟ್ಯೂಬ್‌ನಲ್ಲಿ ವೆಬ್‌ಸೀರೀಸ್ ಮಾಡುತ್ತಿದ್ದೇನೆ. ಅದರಲ್ಲಿ ಕೆಲವು ನಾನೇ ಕಥೆ ಬರೆದು, ನಿರ್ದೇಶನವನ್ನೂ ಮಾಡಿದ್ದೇನೆ. 'ಭವಿಷ್ ಪಿಕ್ಚರ್ಸ್' ಎಂಬ ಚಿಕ್ಕ ನಿರ್ಮಾಣ ಸಂಸ್ಥೆಯನ್ನು ಮಾಡಿಕೊಂಡಿದ್ದೇನೆ. ಸಿನಿಮಾ ಬಗ್ಗೆ ತಿಳಿದುಕೊಳ್ಳುವ ಸಂಬಂಧ ಈ ಪ್ರಯತ್ನವನ್ನು ಮಾಡುತ್ತಿದ್ದೇನೆ. ಯಾರಾದರೂ ಕಂಟೆಂಟ್ ಕೊಟ್ಟರೂ ತೆಗೆದುಕೊಳ್ಳುತ್ತೇನೆ.

◆ **ನಟನೆಯ ಪ್ಯಾಶನ್ ಬಂದಿದ್ದು ಹೇಗೆ?**

ನಟನೆಯನ್ನು ಉಮೇದಿನಿಂದ ಆರಂಭಿಸಲಿಲ್ಲ. ಗೆಳೆಯರು ಹುರಿದುಂಬಿಸಿದ್ದರಿಂದ ಅದನ್ನು ಗಂಭೀರವಾಗಿ ತೆಗೆದುಕೊಂಡೆ. ಶಾಲೆಯಲ್ಲಿದ್ದಾಗ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದೆ. ಒಮ್ಮೆ ಸಿನಿಮಾ ನಟರನ್ನು ಇಟ್ಟುಕೊಂಡು ಏಕಪಾತ್ರಾಭಿನಯ ಮಾಡಿದ್ದೆ. ಆಗ ಶಾಲೆಯಲ್ಲಿ ತುಂಬ ಜನಪ್ರಿಯ ಆದೆ. ಅಲ್ಲಿಂದ ಡಿಪ್ಲೊಮಾ ಸೇರಿದೆ. ಆಮೇಲೆ ಅದೆಲ್ಲ ಮರೆತೇ ಹೋಗಿತ್ತು. ಬಿಇಗೆ ಸೇರಿದ ನಂತರ ನಟನೆಯ ಅಭಿರುಚಿ ಮರುಕಳಿಸಿತು. ಮನೆಯವರ ಒತ್ತಾಯಕ್ಕೆ ಬಿಇ ಪೂರ್ಣಮಾಡಿದೆ. ನಂತರ ಮನೆಯಲ್ಲಿ ಒಪ್ಪಿಸಿ ನಟನೆಯನ್ನು ಕಲಿತೆ. ಈಗ ತೃಪ್ತಿಯ ಬದುಕು ಸಿಕ್ಕಿದೆ.

◆ **'ಜನನಿಯಲ್ಲಿ' ನಿಮ್ಮ ಪಾತ್ರಕ್ಕೆ ಇರುವ ಮಹತ್ವ ಏನು?**

'ಜನನಿ' ಸ್ತ್ರೀವಾದದ ಚೌಕಟ್ಟಿನಲ್ಲಿ ಅನಾವರಣವಾಗುತ್ತಿದೆ. ಮಹಿಳೆಯರು ಮನೆಯಲ್ಲಿ ಅಡುಗೆ ಮಾಡಿಕೊಂಡು ಇರಬೇಕು ಎನ್ನುವ ಪುರುಷ ಯಜಮಾನಿಕೆಯನ್ನು ಪ್ರಶ್ನಿಸುತ್ತದೆ. ನನ್ನ ಅಣ್ಣ ಧರ್ಮ, ಪೌರುಷ ದರ್ಪ ಮಾಡುತ್ತಾನೆ. ನನ್ನ ಜೀವನದಲ್ಲಿ ಜನನಿ ಪ್ರವೇಶ ಆಗುತ್ತದೆ. ಅವಳು ತನ್ನ ಪ್ರತಿಭೆಯನ್ನು ದುಡಿಸಿಕೊಳ್ಳುವ ಪ್ರಯತ್ನ ಮಾಡುತ್ತಾಳೆ. ಅವಳಿಗೆ ನಾನು ಬೆಂಬಲವಾಗಿ ನಿಂತುಕೊಳ್ಳುತ್ತೇನೆ. ನನಗೆ ನನ್ನ ಅಣ್ಣಂದಿರು ತುಂಬ ಅನ್ಯಾಯ ಮಾಡುತ್ತಿರುತ್ತಾರೆ. ಅವರನ್ನು ಎದುರು ಹಾಕಿಕೊಂಡು ಹೆಂಡತಿಗೆ ಬೆನ್ನೆಲುಬಾಗಿ ನಿಲ್ಲುತ್ತೇನೆ. ಮೃದುಸ್ವಭಾವದ ನಾನು ಹೆಚ್ಚು ಓದಿಲ್ಲ. ಜನನಿ ಜೀವನ ಅಂದರೆ ಏನು ಅನ್ನುವುದನ್ನು ಕಲಿಸುತ್ತಾಳೆ. ನನ್ನ ಸಾಮರ್ಥ್ಯವನ್ನು ಹೊರತೆಗೆಯುತ್ತಾಳೆ. ಅಣ್ಣಂದಿರ ಅನ್ಯಾಯವನ್ನು ಎದುರಿಸಲು ಅರಿವನ್ನು ನೀಡುತ್ತಾಳೆ. ನನ್ನ ಹೆಂಡತಿಯ ಆಸೆ ಆಕಾಂಕ್ಷೆಗಳನ್ನು ಪ್ರೋತ್ಸಾಹಿಸುವ ಜೊತೆಗೆ ಜವಾಬ್ದಾರಿಯ ವ್ಯಕ್ತಿಯಾಗಿದ್ದೇನೆ.

◆ **ಕಥೆ ಅಥವಾ ಪಾತ್ರ ಹೇಗೆ ಇರಬೇಕು ಎಂದು ನಿರೀಕ್ಷೆ ಮಾಡುತ್ತೀರಿ?**

ಸಾಮಾನ್ಯವಾಗಿ ನನ್ನ ವ್ಯಕ್ತಿತ್ವಕ್ಕೆ ಈ ಪಾತ್ರ ಸರಿ ಹೋಗುತ್ತದೆ ಎಂದು ಯೋಚಿಸಿಯೇ ಪಾತ್ರವನ್ನು ನೀಡುತ್ತಾರೆ. ಒಟ್ಟಾರೆ ನಾನು ಫ್ಲೆಕ್ಸಿಬಲ್ ನಟ. ನನ್ನಲ್ಲಿ ಸಾಮರ್ಥ್ಯ ಇದೆ, ಅದನ್ನು ಹೇಗಾದರೂ ಬಳಸಿಕೊಳ್ಳಲಿ. ವಯಸ್ಸಾದ ಮೇಲೆ ಈ ಉತ್ಸಾಹ ಮತ್ತು ಶಕ್ತಿ ಇರುತ್ತದೆ ಎನ್ನಲು ಆಗುವುದಿಲ್ಲ. ಚಿತ್ರೀಕರಣದ ಸಂದರ್ಭದಲ್ಲಿ ಎಷ್ಟೇ ಹೊತ್ತಾದರೂ ತಲೆಕೆಡಿಸಿಕೊಳ್ಳುವುದಿಲ್ಲ. ರಗಡ್ ಕ್ಯಾರೆಕ್ಟರ್ ಒಂದಕ್ಕೆ ನಾನು ಶೇವ್ ಮಾಡಿಕೊಂಡು ಟ್ರಿಮ್ ಆಗಿ ಹೋದರೆ ಅದಕ್ಕೆ ಸೂಕ್ತ ಆಗುವುದಿಲ್ಲ. ನನ್ನ ಮುಖ ಚಹರೆ ಅವರು ನಿರೀಕ್ಷೆ ಮಾಡುವ ಪಾತ್ರಕ್ಕೆ ಹೊಂದಿಕೆ ಆಗುವುದಿಲ್ಲ. ಒಂದು ವೇಳೆ ನಾಯಕನ ಪಾತ್ರಕ್ಕೆ ದಾಡಿ ಬಿಟ್ಟುಕೊಂಡು ಹೇಗೋ ಹೋದರೂ ಆಗುವುದಿಲ್ಲ. ಪಾತ್ರಕ್ಕೆ ತಕ್ಕಂತೆ ವ್ಯಕ್ತಿತ್ವವನ್ನು ಹುಡುಕುತ್ತಿರುತ್ತಾರೆ. ನನಗೆ ಬಹುತೇಕರು ಲವರ್ ಬಾಯ್ ಪಾತ್ರ ಸೂಕ್ತ ಆಗುತ್ತದೆ ಎಂದು ಹೇಳುತ್ತಾರೆ. ನಾನೇ ಆಯ್ಕೆ ಮಾಡಿಕೊಳ್ಳುವ ಮಟ್ಟಿಗೆ ಇನ್ನೂ ನಾನು ಬೆಳೆದಿಲ್ಲ. ನನ್ನನ್ನು ಹೇಗೆ ನೋಡುತ್ತಾರೋ ಅಂತಹ ಪಾತ್ರಗಳನ್ನು ಮಾಡುತ್ತೇನೆ.

■ **ರಾಘವೇಂದ್ರ ಕೆ.**